ಪಿ.ಎಸ್. ಶ್ರೀವತ್ಸ, ಬೆಂಗಳೂರು
*ಅಕಸ್ಮಾತ್ ದೇವ ಒಬ್ಬನಿರದೆ ಇಬ್ಬರಿದ್ದಿದ್ದರೆ...?*



ಒಬ್ಬ ಡೇ ಷಿಫ್ಟ್‌ನಲ್ಲಿರುತ್ತಿದ್ದ, ಇನ್ನೊಬ್ಬ ನೈಟ್ ಷಿಫ್ಟ್‌ನಲ್ಲಿರುತ್ತಿದ್ದ.

ಡಾ. ಸೀಮಂತಿನಿ ದೇಸಾಯಿ, ವರ್ತೂರು
*ಈಗೀಗ ಬಿಡುಗಡೆಯಾಗುತ್ತಿರುವ ಕನ್ನಡ ಚಿತ್ರಗೀತೆಗಳ ಸಾಹಿತ್ಯದ ಬಗ್ಗೆ ಭವಿಷ್ಯ ಹೇಳುವವರ ಭಾಷೆಯಲ್ಲಿ ಹೇಳುತ್ತೀರಾ?*
ಸಾಹಿತ್ಯದಲ್ಲಿ ಕಟಕ, ವೃಶ್ಚಿಕ, ಮಿಥುನಗಳೇ ಹೆಚ್ಚಾಗಿರುವುದರಿಂದ ಮೀನಮೇಷ ಎಣಿಸದೆ ಕುಂಭ ಒಡೆಯುವತ್ತ ಸಾಗಿದೆ.

ಅಮರಯ್ಯಾ ಪತ್ರಿಮಠ, ಸುರಪೂರ
*ನಿಮ್ಮ ರಾಶಿ ಯಾವುದು?*
ಉತ್ತರಿಸುವಾಗ ಧನುಸ್ಸು, ಕುಟುಕುವಾಗ ವೃಶ್ಚಿಕ; ಖರ್ಚಿನ ಬಾಬ್ತು ಬಂದಾಗ ಮೀನ-ಮೇಷ, ನಿದ್ರಿಸುವಾಗ ವೃಷಭ!

ಹಾಡ್ಯ ಬಿ. ಜಯಾನಂದ, ಮೈಸೂರು
*ಮಹಾತ್ಮರು ಮರಣದ ನಂತರ ನಕ್ಷತ್ರಗಳಾಗುತ್ತಾರಂತೆ. ನಮ್ಮ ರಾಜಕಾರಣಿಗಳು?*



ಇದ್ದಷ್ಟು ದಿನ ನಕ್ಷತ್ರಿಕರು. ಸತ್ತ ನಂತರ ದುಷ್ಟ ಗ್ರಹಗಳು!

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಕಪ್ಪೆಯ ಪ್ರಪಂಚ ಯಾವುದು?*
ಬಾವಿಯೇ. ಆದರೆ ಈ ಬೋರ್‌ವೆಲ್ ಯುಗದಲ್ಲಿ ಬಾವಿಯಿಲ್ಲದೆ ನಿರಾಶ್ರಿತವಾಗಿ 'ಬಾವಿಭಾಗ್ಯ'ಕ್ಕೆ ಸರ್ಕಾರಕ್ಕೆ ಅರ್ಜಿ ಗುಜರಾಯಿಸಿದೆಯಂತೆ!

ಎಂ.ಜಿ. ಚನ್ನಪ್ಪಸ್ವಾಮಿ, ಭದ್ರಾವತಿ
*ಮನುಷ್ಯರಂತೆ ಪ್ರಾಣಿಗಳೂ ಸತ್ತ ನಂತರ ಏಕೆ ದೆವ್ವಗಳಾಗುವುದಿಲ್ಲ?*
ಆಸೆ, ಆಸ್ತಿ, ಸ್ವಾರ್ಥ, ಸೇಡು, ದುರ್ಬುದ್ಧಿ ಇಲ್ಲವಾದ್ದರಿಂದ.

ಬಿ.ಎಸ್. ಮಳ್ಳೂರ, ಹಲಗತ್ತಿ
*ಮನುಷ್ಯನಿಗೆ ಅಂಗಾಂಗಗಳೇ ಇಲ್ಲದಿದ್ದರೆ ಏನಾಗುತ್ತಿತ್ತು?*
ಹುಲಿ, ಚಿರತೆ, ಸಿಂಹಗಳು ನಿಧಾನವಾಗಿ ಫುಟ್‌ಬಾಲ್ ಆಡಿಕೊಂಡು ನರಮಾಂಸ ತಿನ್ನುತ್ತಾ ಮನುಕುಲವನ್ನು ನಿರ್ನಾಮ ಮಾಡಬಹುದಿತ್ತು!

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
*ಹುಡುಗಿಯರ ಮಾತುಗಳಿಗೆ ಕಾಮನಬಿಲ್ಲು ಅಂತಾರಲ್ಲ, ಏಕಿರಬಹುದು?*
ಮಾತುಮಾತಿನಲ್ಲೇ ಕಾಮಣ್ಣಗಳಿಂದ ಸರಿಯಾಗಿ ಬಿಲ್ಲು ತೆತ್ತಿಸುವ ಕಲೆ ಇರುವುದರಿಂದ!

ಕೊಕ್ಕಡ ವೆಂಕಟ್ರಮಣಭಟ್, ಮಂಡ್ಯ
*ರಾಮ ಸಮುದ್ರಕ್ಕೆ ಅಷ್ಟು ತ್ರಾಸಬಿದ್ದು ಸೇತುವೆ ಕಟ್ಟಿ ಲಂಕೆಗೆ ಹೋಗುವ ಬದಲು ಗುಹನ ಸಹಾಯದಿಂದ ದೋಣಿಗಳಲ್ಲೇ ಹೋಗಬಹುದಿತ್ತಲ್ಲ...?*
ಜೊತೆಗಿದ್ದದ್ದು ಕಪಿಗಳಲ್ಲವೇ..... ಮಂಗನಾಟ ಆಡಿ ಇಡೀ ದೋಣಿಗಳನ್ನು ಮುಳುಗಿಸಿಬಿಡುತ್ತವೆಂಬ ಭಯ ಇತ್ತಂತೆ!

ಪುಟ್ಟಗೌರಿ ಚಿದಾನಂದ, ಕಲಬುರಗಿ
*ಮಚ್ಚೆಗೂ, ಹಚ್ಚೆಗೂ ಇರುವ ವ್ಯತ್ಯಾಸವೇನು?*
ಮಚ್ಚೆ ಮನುಷ್ಯನ ಗುರುತು ನೀಡುತ್ತದೆ, ಹಚ್ಚೆ ಮನಸ್ಸಿನ ಜಾಡು ತೋರುತ್ತದೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ನಿತ್ಯ ಏರುವ ಸೂರ್ಯನೇ ಸಂಜೆಗೆ ತಗ್ಗಿ ಸಾಗುವಾಗ ನಮ್ಮ ರಾಜಕಾರಣಿಗಳು ಏಕೆ ಅಹಂ ಬಿಡುವುದಿಲ್ಲ?*
ಏಕೆಂದರೆ ಅವರು ಏರಿದವರಲ್ಲ, ಸಂಜೆಯಾಗುತ್ತಿದ್ದಂತೆ ಸರಿಯಾಗಿ ಏರಿಸಿಕೊಂಡವರು. ನಶೆ ಇದ್ದಲ್ಲಿ ಉಷೆ ಇರುವುದಿಲ್ಲ.

ಮುಕುಂದ ಹೆರಕಲ್ಲ, ಕಲಬುರಗಿ
*ಲಿಪ್‌ಸ್ಟಿಕ್ ಕಂಡುಹಿಡಿದವರು ಯಾರು? ಅದರ ಅವಶ್ಯಕತೆ ಏಕಾಯ್ತು?*
ಲಂಕೆಯ ರಕ್ಕಸಿಯರು. ಸೀತೆಯ ತುಟಿಗಳಂತೆ ತಮ್ಮ ತುಟಿಗಳೂ ಕಾಣಲೆಂಬ ತಹತಹ.

## ಬಹುಮಾನಿತ ಪ್ರಶ್ನೆ

ಮಲ್ಲನಗೌಡ ಗಂ. ಪಾಟೀಲ, ರಂಕಲಕೊಪ್ಪ
*ರಾತ್ರಿ ಮಲಗಿದಾಗ ನನಗೆ ಹಲವಾರು ಸಾರಿ ಕನಸಿನಲ್ಲಿ ದೊಡ್ಡ ಪ್ರವಾಹವೇ ಕಾಣಿಸುತ್ತಿದೆಯಲ್ಲಾ...?*
ಹೆಂಡತಿಯ ಗೊರಕೆ ಸಮುದ್ರದ ಮೊರೆತದಂತಿರುವುದರಿಂದ ಈ ಭ್ರಮಾಧೀನ ಕನಸು ಬೀಳುತ್ತಿದೆ. ಕಿವಿಗೆ ಹತ್ತಿ ತುರುಕಿಕೊಂಡು ಮಲಗಿ.

ಎಚ್.ಆರ್. ದೇಸಾಯಿ, ರಾಯಚೂರು
*ಶವ ಹೊತ್ತವರು ನಾರಾಯಣ, ನಾರಾಯಣ ಎನ್ನುತ್ತಾರೆ. ನಾರದರು ತಂಬೂರಿ ನುಡಿಸುತ್ತಾ ನಾರಾಯಣ ನಾರಾಯಣ ಎಂದೇಕೆ ಅನ್ನುತ್ತಿದ್ದರು?*
ಸರ್ವೀಸ್ ಪ್ರೊವೈಡರ್ ಆದ ವಿಷ್ಣುವಿಗೆ ನಾರದ ಅಡ್ವರ್ಟೈಸರ್, ತಂಬೂರಿ ಹಿನ್ನೆಲೆ ಸಂಗೀತ, 'ನಾರಾಯಣ'ವೇ ಜಿಂಗಲ್ಸ್, ಶವ ಹೊತ್ತವರು ಆತ್ಮ ತಲುಪಬೇಕಾದ ಸ್ಥಳ ಹೇಳುವ ಟೂರಿಸ್ಟ್ ಗೈಡ್‌ಗಳು.

ನಾರಾಯಣ ಎಸ್.ತೋನ್ಸೆ, ನವೀ ಮುಂಬೈ
*ಬ್ಯಾಟ್ಸ್‌ಮನ್ ಔಟ್ ಆಗಿದ್ದಾನೆಂದು ತಿಳಿಸಲು ಅಂಪೈರ್ ಬೆರಳನ್ನು ಮೇಲಕ್ಕೆ ಎತ್ತಿ ಏಕೆ ತೋರಿಸುತ್ತಾರೆ?*



ಇನ್ನು ನಿನ್ನ ಕೆರಿಯರ್ ಅನ್ನು ಆ ಮೇಲಿರುವವನೇ ಕಾಪಾಡಬೇಕು ಎಂದು ಸೂಚಿಸಲು.

ಶ್ರೀಮತಿ ನಾಗವೇಣಿ ಶೇಖರ್, ಮೈಸೂರು
*ರಾಶಿಗಳಲ್ಲಿ ಮೇಷ ಮೊದಲು, ಮೀನ ಕಡೆಯದಾದರೂ ಮೇಷ-ಮೀನ ಎನ್ನದೆ ಮೀನ-ಮೇಷ ಎನ್ನುವುದೇಕೆ?*
ಮೀನ ಹೆಣ್ಣಿನ ಹೆಸರು ಮೇಷ(ಶ) ಗಂಡಿನ ಹೆಸರು (ಉದಾ:ರಮೇಶ, ಹನುಮೇಶ); ಲೇಡೀಸ್ ಫಸ್ಟ್ ಎಂಬುದೇ ನಮ್ಮ ಕ್ರಮ!

ಎಂ.ಎಸ್. ಸೋಮಶೇಖರ್, ಮೈಸೂರು
*ರಸಪ್ರಶ್ನೆಗಳಲ್ಲಿರುವ ಹತ್ತನೆಯ ಹೊಸ ರಸ ಯಾವುದು?*
ಮೇಧೋಜೀರ್ಣಕ ರಸ!

■ ರಾಮ್